1. The Financial Results of the Company for the quarter and half year ended 30th September, 2026 have been reviewed and recommended by the Audit Committee and approved by the Board of Directors of the Company in their respective meetings held on 13th November, 2026. The statutory auditor of the Company have carried out Limited Review of these Results and the Results are being published in accordance with Regulation 33 of SEBI (Listing Obligations and Disclosure Requirements) Regulations, 2015
2. The above is an extract of the detailed format of Un-Audited Financial Results filed with the Stock Exchange under Regulation 33 of SEBI (Listing Obligations and Disclosure Requirements) Regulations, 2015. The full format of the Un-audited Financial Results are available on the stock Exchange website (www.bseindia.com and www.nseindia.com) and the company website (www.twamevcons.com). The Results can be accessed by scanning the QR Code provided below.

Date: 13th November, 2026
Place: Kolkata

For Twamev Construction and Infrastructure Limited
Sd/-
Tarun Chauturvedi
Whole-time Director
DIN: 02309045

ಮೇಕೆದಾಟು ಯೋಜನೆಗೆ ಅನುಮತಿ ಕೊಡಿ

ರಾಜ್ಯಕ್ಕೆ ಆದ ಅನ್ಯಾಯ ಸರಿಪಡಿಸಲು ಕಾವೇರಿ ತೀರ್ಪಿನ ಮರು ಪರಿಶೀಲನೆ ಒತ್ತಾಯ | ಪ್ರಧಾನಿ ಮೋದಿಗೆ ಮಾಜಿ ಪಿಎಂ ದೇವೇಗೌಡರ ಪತ್ರ

■ **ವಿಕ ಸುದ್ದಿಲೋಕ** ಬೆಂಗಳೂರು


ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಮೇಕೆದಾಟು ಯೋಜನೆ ಅತ್ಯವಶ್ಯಕ. ಈ ಕುರಿತು ಸಲ್ಲಿಸಲಾಗಿರುವ ವಿಸ್ತೃತ ಯೋಜನಾ ವರದಿಗೆ ಆದ್ಯತೆ ಮೇರೆಗೆ ಅನುಮೋದನೆ ನೀಡಬೇಕು ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದ್ದಾರೆ.



ಕಾವೇರಿ ಕೊಳ್ಳದ ಸ್ಥಿತಿಗತಿ ಕುರಿತಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವ ಗೌಡರು, ''ತಮಿಳುನಾಡು ಸರಕಾರ ಮೇಕೆದಾಟು ವಿಚಾರಕ್ಕೆ ಹೊಸ ನ್ಯಾಯಾಧಿಕರಣ ರಚಿಸುವಂತೆ ಕೇಂದ್ರ ಸರಕಾರಕ್ಕೆ ಇತ್ತೀಚೆಗೆ ದೂರು ಸಲ್ಲಿಸಿದೆ. ಪ್ರಸ್ತಾವಿತ ಹೊಸ ನ್ಯಾಯಾಧಿಕರಣ ರಚನೆಯಾದಾಗ ಹಳೆಯ ಕಾವೇರಿ ತೀರ್ಪಿನ ಮರು ಪರಿಶೀಲನೆಯ ಜವಾಬ್ದಾರಿಯನ್ನೂ ಅದೇ ನ್ಯಾಯಮಂಡಳಿಗೆ ವಹಿಸಬೇಕು,'' ಎಂದು ಸಲಹೆ ನೀಡಿದ್ದಾರೆ.

ಒಂದೆಡೆ ಮೇಕೆದಾಟು ಜಲಾಶಯ ನಿರ್ಮಾಣಕ್ಕೆ ವಿರೋಧಿಸುತ್ತಿರುವ ತಮಿಳುನಾಡು ಸರಕಾರ ಮತ್ತೊಂದೆಡೆ ಮಳೆ ಕೊರತೆಯಿದ್ದರೂ ನೀರು ಬಿಡುಗಡೆ ಮಾಡುವಂತೆ ಒತ್ತಡ ಹೇರುತ್ತಿದೆ. ಈ ಹಿನ್ನೆಲೆಯಲ್ಲಿ ಕಾವೇರಿ ನದಿ ನೀರು ಹಂಚಿಕೆ, ನ್ಯಾಯಾಧಿಕರಣದ ತೀರ್ಪುಗಳು ಮತ್ತು ನೀರಾವರಿ ಯೋಜನೆಗಳ ಬಗ್ಗೆ ಅಗಾಧ ಜ್ಞಾನ ಹೊಂದಿರುವ ದೇವೇಗೌಡರು ತಮ್ಮ ಪತ್ರದ ಮೂಲಕ ಪ್ರಧಾನಿ ಅವರಿಗೆ ವಸ್ತುಸ್ಥಿತಿಯನ್ನು ಮನದಟ್ಟು ಮಾಡಿಕೊಡುವ ಪ್ರಯತ್ನ ಮಾಡಿದ್ದಾರೆ.

''2026ರಲ್ಲಿ ರಾಜ್ಯದಲ್ಲಿ ಶೇ.60ರಷ್ಟು ಮಾತ್ರ ಮಳೆಯಾಗಿದೆ. ಇದರಿಂದಾಗಿ ರಾಜ್ಯದ ಜಲಾಶಯಗಳು ಅವುಗಳ ಸಾಮರ್ಥ್ಯದ ಶೇ. 50–55ರಷ್ಟು ಮಾತ್ರ ತುಂಬಿವೆ. ಇಂತಹ ಭೀಕರ ಪರಿಸ್ಥಿತಿಯಲ್ಲಿಯೂ ಮುಂಬರುವ ಬೇಸಿಗೆಯಲ್ಲಿ ಬೆಂಗಳೂರು ಹಾಗೂ



ಸುತ್ತಮುತ್ತಲಿನ ಪ್ರದೇಶಗಳ ಕುಡಿಯುವ ನೀರಿನ ಅಗತ್ಯಕ್ಕಾಗಿ ಕಾಯ್ದಿರಿಸಬೇಕಾದ ಅಲ್ಪ ನೀರನ್ನೂ ತಮಿಳುನಾಡಿನ ಕೃಷಿ ಅಗತ್ಯಗಳಿಗಾಗಿ ಬಿಡುವಂತೆ ಸಿಡಬ್ಲ್ಯೂಎಂಎ ಪದೇಪದೆ ನಿರ್ದೇಶನ ನೀಡುತ್ತಿರುವುದು ಆತಂಕಕಾರಿಯಾಗಿದೆ. 1990ರಲ್ಲಿ ರಚನೆಯಾದ ಕಾವೇರಿ ನ್ಯಾಯಾಧಿಕರಣವು ಇತಿಹಾಸದಲ್ಲೇ ಮೊದಲ ಬಾರಿಗೆ 12 ತಿಂಗಳ ಮಾಸಿಕ ಬಿಡುಗಡೆ ವೇಳಾಪಟ್ಟಿಯನ್ನು ನಿಗದಿಪಡಿಸುವ ಅಸಹಜ ಮಧ್ಯಂತರ ಆದೇಶವನ್ನು ನೀಡಿತು. 2007ರ ಅಂತಿಮ ತೀರ್ಪಿನಲ್ಲೂ ಕರ್ನಾಟಕಕ್ಕೆ ನ್ಯಾಯಸಮ್ಮತವಾಗಿ ಸಿಗಬೇಕಿದ್ದ ಪ್ರಮಾಣಕ್ಕಿಂತ ಕಡಿಮೆ ನೀರನ್ನು ಹಂಚಿಕೆ ಮಾಡಿ ಸ್ಪಷ್ಟ ತಾರತಮ್ಯ ಮಾಡಿದೆ,'' ಎಂದು ದೇವೇಗೌಡರು ಪ್ರಧಾನಿಗೆ ಬರೆದ 6 ಪುಟಗಳ ಸುದೀರ್ಘ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಗೋದಾವರಿ–ಕೃಷ್ಣಾ–ಕಾವೇರಿ ನದಿ ಜೋಡಣೆ ಯೋಜನೆಯಲ್ಲಿ ರಾಜ್ಯಕ್ಕೆ ಕೇವಲ 15.9 ಟಿಎಂಸಿ ನೀರು ತಾತ್ಕಾಲಿಕವಾಗಿ ಹಂಚಿಕೆಯಾಗಿದೆ. ಇದನ್ನು ಹೆಚ್ಚಿಸುವಂತೆಯೂ ದೇವೇಗೌಡರು ಪ್ರಧಾನಿಗೆ ಮನವಿ ಮಾಡಿಕೊಂಡಿದ್ದಾರೆ.

ಸಂವಿಧಾನ ಬಾಹಿರ ಅಧಿಕಾರ: ''ಜಲಶಕ್ತಿ ಸಚಿವಾಲಯವು 2018ರಲ್ಲಿ ಸಿದ್ಧಪಡಿಸಿದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಕರಡು ಯೋಜನೆ ರಾಜ್ಯಗಳ ಸಾಂವಿಧಾನಿಕ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಸಂವಿಧಾನದ 7ನೇ ಅನುಸೂಚಿಯ ರಾಜ್ಯಪಟ್ಟಿಯ ನಮೂದು 17ರ ಪ್ರಕಾರ 'ನೀರಾವರಿ' ಎಂಬುದು ಸಂಪೂರ್ಣವಾಗಿ ರಾಜ್ಯಗಳ ವ್ಯಾಪ್ತಿಗೆ ಬರುವ ವಿಷಯವಾಗಿದೆ. ಆದರೆ, ಕಾವೇರಿ ನೀರಿನ ಸಂಗ್ರಹ, ಹಂಚಿಕೆ, ಬೆಳೆ ಪದ್ಧತಿಯ ಬದಲಾವಣೆ ಮತ್ತು ಜಲಾಶಯಗಳ ಕಾರ್ಯಾಚರಣೆಯಂತಹ ಸೂಕ್ಷ್ಮ ವಿಚಾರಗಳಲ್ಲಿ ಪ್ರಾಧಿಕಾರಕ್ಕೆ ಹಸ್ತಕ್ಷೇಪ ಮಾಡಲು ವ್ಯಾಪಕ ಅಧಿಕಾರ ನೀಡಿರುವುದು ಸಂವಿಧಾನ ಬಾಹಿರ,'' ಎಂದು ಗೌಡರು ವಿವರಿಸಿದ್ದಾರೆ.

''ಕರ್ನಾಟಕಕ್ಕೆ ಹಂಚಿಕೆಯಾದ ನೀರನ್ನು ತನ್ನ ಹಿತಾಸಕ್ತಿಗೆ ಅನುಗುಣವಾಗಿ ಬಳಸುವ ಸ್ವಾತಂತ್ರ್ಯವಿದೆ. ಹಂಚಿಕೆಯಾದ ನೀರಿನ ಪ್ರಮಾಣ ಕಡಿಮೆಯಾಗದ ಹೊರತು ಬೇರೆ ಯಾವುದೇ ರಾಜ್ಯವು ಈ ವಿಷಯದಲ್ಲಿ ಹಸ್ತಕ್ಷೇಪ ಮಾಡುವ ಹಕ್ಕು ಹೊಂದಿಲ್ಲ' ಎಂದು 2025ರ ನವೆಂಬರ್ 13ರ ಆದೇಶದಲ್ಲಿ ಸುಪ್ರೀಂಕೋರ್ಟ್ ಹೇಳಿದೆ. ಈ ಆದೇಶದ ಅನ್ವಯ ಸಿಡಬ್ಲ್ಯೂಎಂಎ ಅಧಿಕಾರವನ್ನು ಕೇವಲ ಕರ್ನಾಟಕ–ತಮಿಳುನಾಡು ಗಡಿಯಲ್ಲಿರುವ ಬಿಳಿಗುಂಡ್ಲು ಅಳತೆ ಕೇಂದ್ರದಲ್ಲಿ ನೀರಿನ ಹರಿವಿನ ಮೇಲ್ವಿಚಾರಣೆಗಷ್ಟೆ ಸೀಮಿತಗೊಳಿಸಬೇಕು,'' ಎಂದು ಪ್ರತಿಪಾದಿಸಿದ್ದಾರೆ.



ಪ್ರಶ್ನೆ: ಎಷ್ಟೇ ಪ್ರಯತ್ನಿಸಿದರೂ ಹುಡುಗಿ ಸಿಗುತ್ತಿಲ್ಲ, ನಾನು ಗೃಹಸ್ಥನಾಗುವೆನೆ ಗುರೂಜಿ?

ಜನ್ಮ ದಿನಾಂಕ: 04.09.1994 **ನಕ್ಷತ್ರ:** ಪುಬ್ಬಾ

ಪರಿಹಾರ: ರಾಶಿಯಲ್ಲಿ ಗುರು ಇರುವಾಗ ನೀವು ಚಿಂತೆ ಮಾಡುವ ಅವಶ್ಯಕತೆ ಇರುವುದಿಲ್ಲ. ಮದುವೆಯ ಯೋಗ ನಿಮ್ಮ ಜಾತಕದಲ್ಲಿದೆ. ಬೇಸರ ಮಾಡಿಕೊಳ್ಳದೆ ಮತ್ತೆ ಹುಡುಗಿಯನ್ನು ನೋಡಲು ನಿಮ್ಮ ಹಿರಿಯರಿಗೆ ತಿಳಿಸಿ. ಪ್ರಯತ್ನ ಮುಂದುವರಿಯಲಿ. 2027ರಲ್ಲಿ ಗುರುವು ಕನ್ಯಾ ರಾಶಿಗೆ ಬಂದಾಗ ಒಳ್ಳೆಯ ಕನ್ಯೆಯೂ ಸಿಕ್ಕಿ ಮದುವೆಯೂ ಆಗುತ್ತದೆ. ಮದುವೆಯ ನಂತರ ಶ್ರೀನಿವಾಸ ಕಲ್ಯಾಣ ಮಾಡುವೆವೆಂಬ ಹರಕೆ ಇರಿಸಿ . ಕಲ್ಯಾಣವಾಗುತ್ತದೆ.

ನೀವೂ ಪ್ರಶ್ನೆ ಕೇಳಬಹುದು...

ನೀವು ನಿಮ್ಮ ವೈಯಕ್ತಿಕ ಪ್ರಶ್ನೆಯನ್ನು ಇಲ್ಲಿ ಕೇಳಬಹುದು. **ರಾಜಗುರು ಬಿ.ಎಸ್. ದ್ವಾರಕನಾಥ್** ಅವರು ನಿಮ್ಮ ಒಂದು ಪ್ರಶ್ನೆಗೆ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಯನ್ನು ಜನ್ಮದಿನಾಂಕ, ಸಮಯ (ಬೆಳಗ್ಗೆ/ಮಧ್ಯಾಹ್ನ/ರಾತ್ರಿ), ಹುಟ್ಟಿದ ಸ್ಥಳ, ರಾಶಿ–ನಕ್ಷತ್ರದೊಂದಿಗೆ ಈ ಕೆಳಗಿನ ನಂಬರ್‌ಗೆ ವಾಟ್ಸ್‌ಆ್ಯಪ್ ಮಾಡಿ. ದಿನಕ್ಕೊಬ್ಬರ ಪ್ರಶ್ನೆಗೆ ಉತ್ತರ ಪ್ರಕಟಿಸಲಾಗುವುದು.

ವಾಟ್ಸ್‌ಆ್ಯಪ್ ಸಂಖ್ಯೆ: 6366422240

ಸಿಎಂ ಫೋನ್ ಕದ್ದಾಲಿಕೆ: ಖರ್ಗೆ

■ **ವಿಕ ಸುದ್ದಿಲೋಕ** ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರವು ಪ್ರತಿಪಕ್ಷದ ನಾಯಕರ ಫೋನ್‌ಗಳನ್ನು ಕದ್ದಾಲಿಸುತ್ತಿದೆ. ಇದಕ್ಕೂ ಮೊದಲು ತಮ್ಮದೇ ಬಿಜೆಪಿಯ ನಾಯಕರು ಹಾಗೂ ಸಂಪುಟ ಸಹೋದ್ಯೋಗಿಗಳ ಫೋನ್‌ಗಳ ಮೇಲೆ ನಿಗಾ ಇರಿಸಲಾಗಿತ್ತು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಗಂಭೀರ ಆರೋಪ ಮಾಡಿದ್ದಾರೆ.

''ಹಾಗೆಯೇ, ಸಿಎಂ ಡಿ.ಕೆ.ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ತಮ್ಮ ಫೋನ್‌ಗಳನ್ನು ಕದ್ದಾಲಿಸಲಾಗುತ್ತಿದೆ,'' ಎಂದು ಪ್ರಿಯಾಂಕ್ ಖರ್ಗೆ ಆರೋಪ ಹೊರಿಸಿದ್ದಾರೆ.

ನಗರದಲ್ಲಿ ಸೋಮವಾರ ಮಾತನಾಡಿದ ಅವರು, ''ದೇಶಾದ್ಯಂತ ಎಲ್ಲರ ಫೋನ್‌ಗಳನ್ನೂ ಕದ್ದಾಲಿಸಲಾಗುತ್ತಿದೆ. ಮುಖ್ಯಮಂತ್ರಿಗಳನ್ನೂ ಬಿಡುತ್ತಿಲ್ಲ, ಖಂಡಿತವಾಗಿಯೂ ಈ ಕೆಲಸ ನಡೆಯುತ್ತಿದೆ. ಗೃಹ ಸಚಿವರಾದ ನಮ್ಮ ಫೋನ್‌ಗಳೂ ಕದ್ದಾಲಿಕೆಯಾಗುತ್ತಿವೆ,'' ಎಂದು ಪುನರುಚ್ಚರಿಸಿದರು.

ಕೃಪಾ ಆಳ್ವ, ರಾಕೇಶ್ ಶೆಟ್ಟಿ ಮುಖಾಮುಖಿ ವಿಚಾರಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ಮಾಜಿ ಸಿಎಂ ಸಿದ್ದರಾಮಯ್ಯ ಕುರಿತಾದ 'ಸ್ಟಿಂಗ್ ವಿಡಿಯೊ' ಸೃಷ್ಟಿಸಿದ್ದ ಆರೋಪ ಪ್ರಕರಣದ ತನಿಖೆ ನಡೆಸುತ್ತಿರುವ ಸಿಸಿಬಿ ಸೈಬರ್ ಕ್ರೈಂ ಪೊಲೀಸರು, ಕಾಂಗ್ರೆಸ್‌ನ ಉಚ್ಚಾಟಿತ ನಾಯಕಿ ಕೃಪಾ ಆಳ್ವ ಹಾಗೂ ಖಾಸಗಿ ಮಾಧ್ಯಮ ಸಂಸ್ಥೆ ಮುಖ್ಯಸ್ಥ ರಾಕೇಶ್ ಶೆಟ್ಟಿಯನ್ನು ಸೋಮವಾರ ತೀವ್ರ ವಿಚಾರಣೆ ನಡೆಸಿದ್ದಾರೆ.



ನಗರ ಪೊಲೀಸ್ ಆಯುಕ್ತರ ಕಚೇರಿ ಆವರಣದಲ್ಲಿರುವ ಸೈಬರ್ ಕ್ರೈಂ ಠಾಣೆಗೆ ಕೃಪಾ ಆಳ್ವ, ರಾಕೇಶ್ ಶೆಟ್ಟಿ ಪ್ರತ್ಯೇಕವಾಗಿ ವಕೀಲರ ಸಮ್ಮುಖದಲ್ಲಿ ವಿಚಾರಣೆಗೆ ಹಾಜರಾದರು. ಮಾಜಿ ಸಿಎಂ ಸಿದ್ದರಾಮಯ್ಯ ಅವರ ಕುರಿತಾಗಿ ಮಹಿಳೆಯೊಬ್ಬರು ಗಂಭೀರ ಆರೋಪಗಳನ್ನು ಮಾಡಿದ್ದ ವಿಡಿಯೊ ಮುಂದಿಟ್ಟ ತನಿಖಾಧಿಕಾರಿಗಳು ಸರಣಿ ಪ್ರಶ್ನೆಗಳನ್ನು ಕೇಳಿದ್ದಾರೆ.

''ಕೃಪಾ ಆಳ್ವ, ರಾಕೇಶ್ ಶೆಟ್ಟಿಯನ್ನು ಒಂದು ಗಂಟೆಗೂ ಅಧಿಕ ಕಾಲ ಮುಖಾಮುಖಿ ಕೂರಿಸಿದ್ದ ತನಿಖಾಧಿಕಾರಿಯು ವಿಡಿಯೊ ಚಿತ್ರೀಕರಿಸಿದ್ದ ಮೂಲ ಉದ್ದೇಶದ ಬಗ್ಗೆ ಪ್ರಶ್ನಿಸಿದ್ದಾರೆ. ಈ ಸಮಯದಲ್ಲಿ ಇಬ್ಬರೂ ವಿಡಿಯೊ ಚಿತ್ರೀಕರಣದ ಹಿಂದೆ ಯಾವುದೇ ದುರುದ್ದೇಶ ಇರಲಿಲ್ಲ ಎಂದಿದ್ದಾರೆ,'' ಎಂದು ಮೂಲಗಳು ಹೇಳಿವೆ.

ಟಿಕೆಟ್‌ಗಾಗಿ ವಿಡಿಯೊ?: ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಇಲ್ಲವೇ ಪುತ್ತೂರಿನ ವಿಧಾನಸಭಾ ಕ್ಷೇತ್ರದ ಟಿಕೆಟ್ ಪಡೆಯುವ ಸಲುವಾಗಿಯೇ ಕೃಪಾ ಆಳ್ವ, ರಾಕೇಶ್ ಶೆಟ್ಟಿ ಜತೆ ಸೇರಿ ಮಹಿಳೆಯನ್ನು ಭೇಟಿಯಾಗಿದ್ದರು. ವಿಡಿಯೊ ಕೂಡ ಮಾಡಿಟ್ಟುಕೊಂಡಿದ್ದರು ಎಂಬ ಬಲವಾದ ಶಂಕೆಯಿದೆ. ಕೃಪಾ ಆಳ್ವ ಕೂಡ ವಿಡಿಯೊದಲ್ಲಿ ಈ ವಿಚಾರ ಪ್ರಸ್ತಾಪಿಸಿದ್ದಾರೆ.

ಆದರೆ, ವಿಚಾರಣೆ ವೇಳೆ ಆರೋಪಿ ಕೃಪಾ ಆಳ್ವ ಯಾವ ವಿಚಾರವನ್ನೂ ಸ್ಪಷ್ಟವಾಗಿ ತಿಳಿಸದೆ ನುಣುಚಿಕೊಳ್ಳುತ್ತಿದ್ದಾರೆ. ''ಸಿದ್ದರಾಮಯ್ಯ ಅವರ ವಿರುದ್ಧ ಮಹಿಳೆಯೊಬ್ಬರು ಗಂಭೀರ ಆರೋಪಗಳನ್ನು ಮಾಡಿರುವ ಸಂಗತಿ ಗೊತ್ತಾಗಿತ್ತು. ಇದರ ಸತ್ಯಾಸತ್ಯತೆ ಪರಿಶೀಲಿಸಲು ಆಕೆಯನ್ನು ಪತ್ತೆಹಚ್ಚಿ ಕೇರಳಂಗೆ ಹೋಗಿದ್ದೆವು. ಅಲ್ಲಿ ಮಹಿಳೆ ಹೇಳಿಕೆಯನ್ನು ಚಿತ್ರೀಕರಿಸಲಾಗಿತ್ತು ಎಂದು ತಿಳಿಸಿದ್ದಾರೆ,'' ಎಂದು ಮೂಲಗಳು ಹೇಳಿವೆ.

ಸುಲಿಗೆ ನಡೆದಿತ್ತೇ?: ವಿಡಿಯೊ ಮುಂದಿಟ್ಟು ಮಾಜಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಯಾರ ಬಳಿಯಾದರೂ ಲಾಭ ಪಡೆಯಲಾಗಿತ್ತೇ? ಎಂಬುದರ ಬಗ್ಗೆ ಇದುವರೆಗೂ ಸ್ಪಷ್ಟತೆಯಿಲ್ಲ. ಈ ಬಗ್ಗೆ ಆರೋಪಿಗಳು ಬಾಯ್ಬಿಡುತ್ತಿಲ್ಲ, ದೂರುದಾರರು ಆದ ಸಿದ್ದರಾಮಯ್ಯ ಕೂಡ ಈ ವಿಚಾರದ ಬಗ್ಗೆ ಏನನ್ನೂ ಉಲ್ಲೇಖಿಸಿಲ್ಲ. ಮುಂದಿನ ಹಂತದಲ್ಲಿ ಈ ಕುರಿತಾದ ಅಕ್ರಮ ಲಾಭದ 'ಒಗಟಿ'ಗೆ ಉತ್ತರ ಸಿಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ನಿಗಮ ಮಂಡಳಿ ಸದಸ್ಯರ ಅವಧಿ ಮುಕ್ತಾಯ

ಬೆಂಗಳೂರು: ರಾಜ್ಯದ ಎಲ್ಲ ನಗರಾಭಿವೃದ್ಧಿ ಪ್ರಾಧಿಕಾರ, ಸ್ಥಳೀಯ ಯೋಜನಾ ಪ್ರಾಧಿಕಾರ ಹೊರತು ಪಡಿಸಿದ ಎಲ್ಲ ನಿಗಮ ಮಂಡಳಿಗೆ ನೇಮಕಗೊಂಡು 2 ವರ್ಷ ಪೂರೈಸಿರುವ ಸದಸ್ಯರು, ನಿರ್ದೇಶಕರನ್ನು ತಕ್ಷಣದಿಂದ ಬಿಡುಗಡೆ ಮಾಡುವಂತೆ ಸಿಎಂ ಕಚೇರಿಯಿಂದ ಸೂಚನೆ ನೀಡಲಾಗಿದೆ. ಹೊಸಬರಿಗೆ ಅವಕಾಶ ಮಾಡಿಕೊಡುವ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗುತ್ತಿದೆ.

ಪಂಚಾಂಗ 17-11-2026

ಪರಾಭವ ನಾಮ ಸಂವತ್ಸರ	ರಾಹು ಕಾಲ: ಮ. 3.00 - 4.30
ಅಯನ: ದಕ್ಷಿಣಾಯನ.	
ಋತು: ಶರತ್.	ಗುಳಿಕ ಕಾಲ: ಮ. 12.00-1.30
ಮಾಸ: ಕಾರ್ತಿಕ. **ಪಕ್ಷ:** ಶುಕ್ಲ.	
ಮಳೆ ನಕ್ಷತ್ರ: ವಿಶಾಖಾ.	ಯಮಗಂಡ ಕಾಲ: ಬೆ. 9.00-10.30
ನಿತ್ಯನಕ್ಷತ್ರ: ಧನಿಷ್ಠಾ. **ತಿಥಿ:** ಅಷ್ಟಮಿ.	
ಯೋಗ: ವೃದ್ಧಿ. **ಕರಣ:** ಭದ್ರ.	ಸೂರ್ಯ ಉದಯ: ಬೆ. 6.20
ವಾರ: ಮಂಗಳವಾರ.	ಸೂರ್ಯ ಅಸ್ತ: ಸಂ. 5.48

ಹೈಕಮಾಂಡ್ ತೀರ್ಮಾನ

ಬೆಂಗಳೂರು: ಹಿರಿಯೂರು ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಟಿಕೆಟ್ ವಿಚಾರದಲ್ಲಿ ಎನ್‌ಡಿಎ ಮೈತ್ರಿಕೂಟದ ಬಿಜೆಪಿ, ಜೆಡಿಎಸ್ ನಡುವೆ ಪೈಪೋಟಿ ನಡೆದಿರುವ ಬೆಳವಣಿಗೆ ನಡುವೆಯೇ ಡ್ಯಾಮೇಜ್ ಕಂಟ್ರೋಲ್‌ಗೆ ಮುಂದಾಗಿರುವ ರಾಜ್ಯ ಬಿಜೆಪಿಯು ಪ್ರತಿಷ್ಠೆ ಬದಲಿಗೆ ಹೈಕಮಾಂಡ್ ನಿರ್ಧಾರವೇ ಅಂತಿಮ ಎನ್ನುವ ಮೂಲಕ ಗೊಂದಲಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿದೆ.



ಹಿರಿಯೂರು ಕ್ಷೇತ್ರದ ಉಪಚುನಾವಣೆಗೆ ಬಿಜೆಪಿ ಅಭ್ಯರ್ಥಿ ಕಣಕ್ಕಿಳಿಯಲಿದ್ದಾರೆ ಎಂಬ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಹೇಳಿಕೆಗೆ ಪ್ರತ್ಯುತ್ತರ ಎಂಬಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಹಿರಿಯೂರಿನ ಜನಾಭಿಪ್ರಾಯವನ್ನು ಗೌರವಿಸಬೇಕು ಎಂದಿದ್ದರು. ಎನ್‌ಡಿಎ ಮೈತ್ರಿಕೂಟದ ಪಕ್ಷಗಳ ಉಭಯ ನಾಯಕರ ಭಿನ್ನ ಹೇಳಿಕೆಯು ಒಗ್ಗಟ್ಟಿನ ಬದಲಿಗೆ ಸಂಘರ್ಷಕ್ಕೆ ಎಡೆ ಮಾಡಿಕೊಡುವ ಸನ್ನಿವೇಶ ಸೃಷ್ಟಿಗೆ ನಾಂದಿ ಹಾಡಿತ್ತು. ಆ ಹಿನ್ನೆಲೆಯಲ್ಲಿ ಅಶೋಕ್ ಅವರು ''ಹೈಕಮಾಂಡ್ ತೀರ್ಮಾನವೇ ಅಂತಿಮ,'' ಎನ್ನುವ ಮೂಲಕ ತಿಳಿಗೊಳಿಸುವ ಪ್ರಯತ್ನ ಮಾಡಿದ್ದಾರೆ.

ಅತಿ ಕಡಿಮೆ ವೆಚ್ಚದಲ್ಲಿ ಕುಮಾರಕೃಪಾ ನವೀಕರಣ

ಕುಮಾರಕೃಪಾ ಅತಿಥಿ ಗೃಹಕ್ಕೆ ಗಂಗಾ ಎಂದು ಮರುನಾಮಕರಣ | ವೆಚ್ಚದ ಬಗ್ಗೆ ಸಿಎಂ ಸ್ಪಷ್ಟನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದ ಕೂಗಳತೆ ದೂರದಲ್ಲಿರುವ ಕುಮಾರಕೃಪಾ ಅತಿಥಿ ಗೃಹದ ಹಳೆಯ ಕಟ್ಟಡಕ್ಕೆ 'ಗಂಗಾ' ಎಂದು ಮರು ನಾಮಕರಣ ಮಾಡಿರುವ ಸರಕಾರ ಇನ್ನು ಮುಂದೆ ಆ ಕಟ್ಟಡವನ್ನು ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಎಂದು ಘೋಷಿಸಿದೆ.



ಈ ಸಂಬಂಧ ಸೋಮವಾರ ಅಧಿಕೃತ ಆದೇಶವನ್ನೂ ಸರಕಾರ ಹೊರಡಿಸಿದೆ. ಕಾರ್ತಿಕ ಸೋಮವಾರದಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪತ್ನಿ ಉಷಾ ಶಿವಕುಮಾರ್ ಅವರೊಂದಿಗೆ ವಿಶೇಷ ಪೂಜೆ ನೆರವೇರಿಸಿ ಈ ಅಧಿಕೃತ ನಿವಾಸವನ್ನು ಪ್ರವೇಶಿಸಿದರು. ಇದೇ 19ರಂದು ಎಲ್ಲ 224 ಶಾಸಕರು, ಎಂಎಲ್ಸಿಗಳು, ರಾಜ್ಯದ ಸಂಸದರನ್ನು ತಮ್ಮ ನಿವಾಸಕ್ಕೆ ಆಹ್ವಾನಿಸಿ ನಂತರ ಎಲ್ಲರನ್ನೂ ಅದೇ ನಿವಾಸದಲ್ಲಿ ಭೇಟಿಯಾಗುವುದಾಗಿ ಸಿಎಂ ಪ್ರಕಟಿಸಿದ್ದಾರೆ.

ಶಾಸಕರು, ಅಧಿಕಾರಿಗಳ ಭೇಟಿಗೆ ಅಧಿಕೃತ ನಿವಾಸದಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಸಾರ್ವಜನಿಕ ಭೇಟಿಗೆ ಗೃಹ ಕಚೇರಿ ಕೃಷ್ಣಾದಲ್ಲಿ ಪ್ರತ್ಯೇಕ ಸಭಾಂಗಣ ನಿರ್ಮಿಸಲಾಗುತ್ತಿದೆ. ಒಂದೆರಡು ತಿಂಗಳಲ್ಲಿ ಆ ಸಭಾಂಗಣ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಪತ್ನಿ ಸಮೇತರಾಗಿ ಸೋಮವಾರ 'ಗಂಗಾ' ನಿವಾಸದಲ್ಲಿ ವಿಶೇಷ ಪೂಜೆ ನೆರವೇರಿಸಿದ ಬಳಿಕ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, ''ಸರಕಾರಿ ಅತಿಥಿ ಗೃಹದಲ್ಲಿ ಕುಮಾರ ಕೃಪಾವನ್ನು 'ಗಂಗಾ' ಎಂದು ಮರು ನಾಮಕಾರಣ ಮಾಡಲಾಗಿದೆ. ಅಧಿಕೃತ ನಿವಾಸವಾಗಿ ಪರಿವರ್ತಿಸಲಾಗಿದೆ. ಈ ಕಟ್ಟಡದ ಪರಂಪರೆಯನ್ನು ಉಳಿಸಿಕೊಂಡು ಶೇ.10ರಷ್ಟು ಮರುವಿನ್ಯಾಸ ಮಾಡಲಾಗಿದೆ. ನಾನು ಪಡೆದಿದ್ದ ಸರಕಾರಿ ನಿವಾಸ ಚಿಕ್ಕದಾಗಿತ್ತು. ಈ ಮಧ್ಯೆ ಕುಮಾರಕೃಪಾ ಅತಿಥಿ ಗೃಹ ಉಪಯೋಗವಾಗದ ಕಾರಣ ಇದನ್ನೇ ಅಧಿಕೃತ ನಿವಾಸವಾಗಿ ಪರಿವರ್ತಿಸಿ ಖಾಸಗಿ ಪೂಜೆ ನೆರವೇರಿಸಿದ್ದೇನೆ. ಗುರುವಾರ 224 ಶಾಸಕರು, ರಾಜ್ಯದ ಸಂಸದರು, ಎಂಎಲ್ಸಿಗಳನ್ನು ಆಹ್ವಾನಿಸುತ್ತೇನೆ. ಆ ನಂತರ ನಾನು ಇದೇ ನಿವಾಸದಲ್ಲಿ ಎಲ್ಲರನ್ನು ಭೇಟಿ ಮಾಡುತ್ತೇನೆ,'' ಎಂದು ಹೇಳಿದರು.

ಶೇ.90ರಷ್ಟು ಖಾಸಗಿ ಪೀಠೋಪಕರಣ: ''ನವೀಕರಣ ಕಾರ್ಯದ ಖರ್ಚಿನ ಬಗ್ಗೆ ಕೆಲವರು ಪ್ರಶ್ನಿಸಬಹುದು. ಭದ್ರತೆ ಹಾಗೂ ರಸ್ತೆ ಸೌಕರ್ಯಕ್ಕೆ ಹೆಚ್ಚು ವೆಚ್ಚವಾಗಿದೆ. ಉಳಿದಂತೆ ಶೇ.90ರಷ್ಟು ಪೀಠೋಪಕರಣಗಳು ನನ್ನ ಖಾಸಗಿಯದ್ದಾಗಿವೆ. ನಾನು ಚದರ ಅಡಿಗೆ 60– 80 ರೂ. ಮೌಲ್ಯದ ಗ್ರಾನೈಟ್ ಬಳಸಿದ್ದೇನೆ. ವೆಚ್ಚದ ಬಗ್ಗೆ ಟೀಕಿಸಲಿದ್ದಾರೆ ಎಂಬ ಕಾರಣಕ್ಕೇ ನಾನು ನನ್ನ ಮನೆ, ಕುಮಾರ ಕೃಪಾದಲ್ಲಿ ಇದ್ದ ಹಳೇ ಪೀಠೋಪಕರಣ ಇಟ್ಟುಕೊಂಡಿದ್ದೇನೆ. ಈ ಬಗ್ಗೆ ಕೆಲವರು ಆರ್‌ಟಿಐ ಅರ್ಜಿ ಸಹ ಹಾಕಿದ್ದಾರೆ,'' ಎಂದು ಸಿಎಂ ಸ್ಪಷ್ಟಪಡಿಸಿದರು.

ಪಾರಂಪರಿಕ ಕಟ್ಟಡವನ್ನು ಬದಲಾಯಿಸಲಾಗಿದೆ ಎಂಬ ಪ್ರತಿಪಕ್ಷಗಳ ಟೀಕೆಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಅವರು, ''ಪ್ರತಿಪಕ್ಷದವರು ಇರುವುದೇ ಟೀಕಿಸಲು. ಅದು ಅವರ ಕರ್ತವ್ಯ. ಅವರನ್ನೂ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತೇನೆ. ಅವರು ಬಂದು ನೋಡಲಿ,'' ಎಂದರು.

''ಅಧಿಕೃತ ನಿವಾಸದಲ್ಲಿ ಶಾಸಕರು, ಅಧಿಕಾರಿಗಳ ಭೇಟಿ, ಚರ್ಚೆಗೆ ಅವಕಾಶ ಕಲ್ಪಿಸಲಾಗುವುದು. ಸಾರ್ವಜನಿಕ ಭೇಟಿಗೆ ಪಕ್ಕದ ಕೃಷ್ಣಾದಲ್ಲಿ ಪ್ರತ್ಯೇಕ ಸಭಾಂಗಣ ನಿರ್ಮಿಸಲಾಗುತ್ತಿದೆ. ಅದಕ್ಕೆ ಒಂದೆರಡು ತಿಂಗಳು ಕಾಲಾವಕಾಶ ಬೇಕಾಗಲಿದೆ,'' ಎಂದು ತಿಳಿಸಿದರು.



ಕೊಲ್ಲೂರಿನಲ್ಲಿ ಸೋಮವಾರ ನವಚಂಡಿ ಯಾಗದ ಪೂರ್ಣಾಹುತಿಯಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕುಟುಂಬ ಸಮೇತರಾಗಿ ಭಾಗಿಯಾದರು.

'ರಾಜ್ಯದ ಕೆಟ್ಟ ಆಡಳಿತ ಅಂತ್ಯ ಅಗತ್ಯ'

■ **ವಿಕ ಸುದ್ದಿಲೋಕ** ಕೊಲ್ಲೂರು (ಉಡುಪಿ)

ರಾಜ್ಯದ ಹಿತದೃಷ್ಟಿಯಿಂದ ರಾಜ್ಯದ ಕೆಟ್ಟ ಆಡಳಿತ ಅಂತ್ಯಗೊಳ್ಳಬೇಕು. ಸಿಎಂ ಸ್ಥಾನಕ್ಕಿಂತ ರಾಜ್ಯದ ಉಳಿವು ಮುಖ್ಯ. ರಾಜ್ಯದಲ್ಲಿ ಸಿಎಂ ಯಾರಾಗಬೇಕು ಎಂಬುದು ಈಗಿನ ಪ್ರಶ್ನೆಯಲ್ಲ, ರಾಜ್ಯದ ಆಡಳಿತ ವ್ಯವಸ್ಥೆಯನ್ನು ಸರಿಪಡಿಸಿ, ರಾಜ್ಯವನ್ನು ಉಳಿಸುವುದು ಇಂದಿನ ತುರ್ತು ಅಗತ್ಯ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸೋಮವಾರ ಕೊಲ್ಲೂರಿನಲ್ಲಿ ಮಾತನಾಡಿದ ಅವರು, ''ಸಿಎಂ ಸ್ಥಾನ ನನಗೆ ಮುಖ್ಯವಲ್ಲ. ನಾನು ಈಗಾಗಲೇ ಎರಡು ಬಾರಿ ಸಿಎಂ ಕಾರ್ಯನಿರ್ವಹಿಸಿದ್ದೇನೆ. ಆದರೆ ಇಂದು ರಾಜ್ಯದ ಆಡಳಿತ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಅಧಿಕಾರಿಗಳ ವರ್ಗಾವಣೆಯಿಂದ ಹಿಡಿದು ಪ್ರತಿಯೊಂದು ಕ್ಷೇತ್ರದಲ್ಲಿಯೂ ಹಣದ ವ್ಯವಹಾರ ಮತ್ತು ಕಮಿಷನ್ ದಂಧೆ ನಡೆಯುತ್ತಿದೆ,'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಎನ್‌ಡಿಎ ಬಿಕ್ಕಟ್ಟು: ''ಹಿರಿಯೂರು ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್‌ಗೆ ಹಿಂದಿನಿಂದಲೂ ಉತ್ತಮ ರಾಜಕೀಯ ನೆಲೆಯಿದೆ. ಪಕ್ಷದ ಹಲವು ನಾಯಕರು ಈ ಕ್ಷೇತ್ರದಿಂದ ಜನ ಪ್ರತಿನಿಧಿಗಳಾಗಿ ಆಯ್ಕೆಯಾಗಿರುವ ಇತಿಹಾಸ ವಿದೆ. ಈ ಹಿನ್ನೆಲೆಯಲ್ಲಿ ಉಪಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಪ್ರಸ್ತಾಪ ಮಾಡಲಾಗಿದೆ ,'' ಎಂದರು.

ಹಿರಿಯೂರಲ್ಲಿ 21ಕ್ಕೆ ಸಿಎಂ ಸಭೆ

ಚಿತ್ರದುರ್ಗ: ಹಿರಿಯೂರಿನಲ್ಲಿ ನ.21ರಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಪ್ರಜಾಸೇವಾ ಆಂದೋಲನ ಸಭೆ ಜರುಗಲಿದೆ. ಇದಕ್ಕೂ ಮುನ್ನವೇ ಅರ್ಜಿ ನಮೂನೆಗಳನ್ನು ಸಾರ್ವಜನಿಕರಿಗೆ ವ್ಯವಸ್ಥಿತವಾಗಿ ಹಂಚಿಕೆ ಮಾಡಿ, ಸ್ವೀಕೃತವಾಗುವ ಅರ್ಜಿಗಳ ವಿಲೇವಾರಿ ಪ್ರಯತ್ನಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಟಿ.ರಘುಮೂರ್ತಿ ಸೂಚಿಸಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸೋಮವಾರ ಸಭೆ ನಡೆಸಿ, ಮಾತನಾಡಿದ ಸಚಿವರು, ''ಹಿರಿಯೂರಿನಲ್ಲಿ ಸೆ.5ರಂದು ಪ್ರಜಾಸೇವಾ ಆಂದೋಲನ ನಡೆದಿತ್ತು. ಆಗ ಸ್ವೀಕೃತವಾಗಿದ್ದ ಅರ್ಜಿಗಳ ಪೈಕಿ ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ತಡವಾಗಿದ್ದರೆ, ಅದಕ್ಕೆ ಕಾರಣವೇನು ಎಂಬುದನ್ನು ಪಟ್ಟಿ ಮಾಡಿ ಮಾಹಿತಿ ಒದಗಿಸಬೇಕು,'' ಎಂದರು.

ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘ ನಿಯಮಿತ
(ಹಾಪ್‌ಕಾಮ್ಸ್) ಲಾಲ್ ಬಾಗ್, ಬೆಂಗಳೂರು.
ಸಂಖ್ಯೆ: ಹೆಚ್.ಸಿ.ಎಸ್/ಕಾನಿ(ಅ)/ಸಿಬ್ಬಂದಿ/ವಿನಿ 10/703/2026-27 ದಿನಾಂಕ: 16.11.2026

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಪ್ರಕಟಣೆ

ಬೆಂಗಳೂರು ಹಾಪ್ ಕಾಮ್ಸ್ ಸಂಸ್ಥೆಗೆ 2026-27ನೇ ಸಾಲಿಗೆ ಮಾರಾಟ ಮಳಿಗೆಗಳಿಗೆ ಅಗತ್ಯವಿರುವ 50 ಸಂಖ್ಯೆ ಮಾರಾಟ ಸಹಾಯಕರನ್ನು 11 ತಿಂಗಳ ಅವಧಿಗೆ ಸರ್ಕಾರ ನಿಗಧಿ ಪಡಿಸಿದ ಮೀಸಲಾತಿಯಂತೆ ಒದಗಿಸಲು ಅರ್ಹ ಮಾನವ ಸಂಪನ್ಮೂಲ ಸೇವೆ ಒದಗಿಸುವ ಸಂಸ್ಥೆಗಳಿಂದ ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು https://kppp.karnataka.gov.in Ref No: HOPCOMS/2026-27/SE0016 ನಲ್ಲಿ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ. ಇ–ಪ್ರಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 23.11.2026 ಸಂಜೆ 5.30 ಘಂಟೆ ಒಳಗಾಗಿ. ಹೆಚ್ಚಿನ ಮಾಹಿತಿಗಾಗಿ ಶ್ರೀ ವೈ.ಎ.ರಾಮಕೃಷ್ಣ, ದೂರವಾಣಿ ಸಂಖ್ಯೆ: 9986733610 ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಕ್ರ. ಸಂ	ವಿವರ	ಸಂಖ್ಯೆ	ಟೆಂಡರ್‌ನ ಅಂದಾಜು ಮೊತ್ತ	ಇ.ಎಂ.ಡಿ ಮೊತ್ತ
1.	ಮಾರಾಟ ಮಳಿಗೆಗಳಿಗೆ ಸಹಾಯಕರನ್ನು ಹೊರಗುತ್ತಿಗೆ ಆಧಾರದಲ್ಲಿ 11 ತಿಂಗಳ ಅವಧಿಗೆ ಒದಗಿಸುವ ಕುರಿತು	50 ಸಿಬ್ಬಂದಿಗಳು	ರೂ. 100.00 ಲಕ್ಷ ಗಳು	ರೂ. 2.00 ಲಕ್ಷ ಗಳು

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
ಶಾಖಾ ಕಛೇರಿ: ನಂ. 271/1, 2ನೇ ಮಹಡಿ, ಯಶೋಧ ಕಾಂಪ್ಲೆಕ್ಸ್, ಬಿ.ಬಿ. ರಸ್ತೆ, ಚಿಕ್ಕಬಳ್ಳಾಪುರ – 562101.
ಇಮೇಲ್: cbpr.ksfc.@karnataka.gov.in

Ref. No. KSFC/BO/CKB/1021/2026-27 Date: 16-11-2026

ಸಾರ್ವಜನಿಕ ಪ್ರಕಟಣೆ

ಶ್ರೀ. ಶ್ರೀನಿವಾಸಲು.ಪಿ.ವಿ ಬಿನ್ ಲೇಟ್ ಪಿ.ವೆಂಕಟಾಚಲಪತಿ, ರವರು 2002 ಮತ್ತು 2003 ರಲ್ಲಿ ಪರಮೇಶ್ವರ ರೈಸ್ ಇಂಡಸ್ಟ್ರೀಸ್ ಮತ್ತು ಪರಮೇಶ್ವರ ಕನ್ವೆಂಷನ್ ಹಾಲ್ ನಿರ್ಮಿಸಲು ಕೆಎಸ್‌ಎಫ್‌ಸಿ ಯಿಂದ ಸಾಲವನ್ನು ಪಡೆದಿರುತ್ತಾರೆ. ಈ ಸಾಲಕ್ಕೆ ಚಿಂತಾಮಣಿ ಪಟ್ಟಣದ ಚೇಳೂರು ರಸ್ತೆಯಲ್ಲಿರುವ ಸರ್ವೆ ನಂ. 121/1ಎರ 1 ಎಕರೆ 8 ಗುಂಟೆ ಅಡಮಾನವಾಗಿರುತ್ತದೆ. ಈ ಸಾಲಗಳು ಸುಸ್ತಿ ಬಾಕಿಯಾಗಿದ್ದು ಹಾಗೂ ಈ ಘಟಕಗಳ ಬಾಬ್ತು ನಡೆಯುತ್ತಿರುವ ಸಿವಿಲ್ ದಾವೆಗಳು ಜಿಲ್ಲಾ ನ್ಯಾಯಾಲಯ, ಚಿಕ್ಕಬಳ್ಳಾಪುರ ಹಾಗೂ ಮಾನ್ಯ ಉಚ್ಚನ್ಯಾಯಾಲಯ, ಬೆಂಗಳೂರು ಇಲ್ಲಿ ನ್ಯಾಯ ನಿರ್ಣಯಕ್ಕೆ ಕಾಯ್ದಿರಿಸಿದೆ. ಮೇಲ್ಕಂಡ ಸ್ವತ್ತಿನ ಖರೀದಿಯು ಖರೀದಿದಾರರ ಸ್ವಂತ ಜವಾಬ್ದಾರಿ ಮತ್ತು ಹೊಣೆಯಾಗಿರುತ್ತದೆ. ಆದ್ದರಿಂದ ಸಾರ್ವಜನಿಕರು ಸಂಸ್ಥೆಗೆ ಅಡಮಾನವಾಗಿರುವ ಈ ಆಸ್ತಿಯನ್ನು ಖರೀದಿಸಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಸಹಿ/–
ಶಾಖಾ ವ್ಯವಸ್ಥಾಪಕರು, ಚಿಕ್ಕಬಳ್ಳಾಪುರ

ಸಂಪರ್ಕಿಸಿ: 98455 85875

NatWest Markets

ನ್ಯಾಟ್‌ವೆಸ್ಟ್ ಮಾರ್ಕೆಟ್ಸ್ ಪಿಎಲ್‌ಸಿಯ ಭಾರತದಲ್ಲಿನ ಶಾಖೆಯನ್ನು ಮುಚ್ಚಿರುವ ಕುರಿತು ಸೂಚನೆ (ಹಿಂದೆ ದಿ ರಾಯಲ್ ಬ್ಯಾಂಕ್ ಆಫ್ ಸ್ಕಾಟ್‌ಲೆಂಡ್ ಪಿಎಲ್‌ಸಿ, ದಿ ರಾಯಲ್ ಬ್ಯಾಂಕ್ ಆಫ್ ಸ್ಕಾಟ್‌ಲೆಂಡ್ ಎನ್.ವಿ. ಮತ್ತು ಎಬಿಎನ್ ಆಮ್ರೋ ಬ್ಯಾಂಕ್ ಎನ್.ವಿ. ಎಂದು ಕರೆಯಲಾಗುತ್ತಿತ್ತು)

ಸಾರ್ವಜನಿಕ ಸೂಚನೆ

"ನ್ಯಾಟ್‌ವೆಸ್ಟ್ ಮಾರ್ಕೆಟ್ಸ್ ಪಿಎಲ್‌ಸಿ **("ಬ್ಯಾಂಕ್")** 31 ಡಿಸೆಂಬರ್ 2019ರಂದು ವ್ಯವಹಾರ ಸಮಯದ ಮುಕ್ತಾಯದೊಂದಿಗೆ ಭಾರತದಲ್ಲಿನ ತನ್ನ ಎಲ್ಲಾ ವ್ಯವಹಾರಗಳು ಮತ್ತು ಕಾರ್ಯಾಚರಣೆಗಳನ್ನು ನಿಲ್ಲಿಸಿದೆ. ಭಾರತದಲ್ಲಿನ ಬ್ಯಾಂಕ್‌ನಲ್ಲಿ ಜಮಾ ಶಿಲ್ಕಿನ ಮೇಲೆ ಹಕ್ಕು ಕೋರುವ ಯಾವುದೇ ವ್ಯಕ್ತಿಯು ತಮ್ಮ ಹಕ್ಕು ಕೋರಿಕೆಗಳನ್ನು in.service@natwestmarkets.com ಗೆ ಕಳುಹಿಸಬಹುದು.

ಈ ಸೂಚನೆಯನ್ನು ಬ್ಯಾಂಕ್ ಯಾವುದೇ ಹೊಣೆಗಾರಿಕೆ ಅಥವಾ ಹಕ್ಕು ಕೋರಿಕೆಯನ್ನು ಒಪ್ಪಿಕೊಂಡಿದೆ ಅಥವಾ ಅಂಗೀಕರಿಸಿದೆ ಎಂದು ಪರಿಗಣಿಸಲಾಗುವುದಿಲ್ಲ ಮತ್ತು ಬ್ಯಾಂಕ್‌ನ ಎಲ್ಲಾ ಹಕ್ಕುಗಳನ್ನು ಸ್ಪಷ್ಟವಾಗಿ ಕಾಯ್ದಿರಿಸಲಾಗಿದೆ. ತನ್ನ ದಾಖಲೆಗಳಿಗೆ ಹೊಂದಿಕೆಯಾಗದ ಯಾವುದೇ ಹಕ್ಕು ಕೋರಿಕೆಯನ್ನು ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ. ಮಾನ್ಯವೆಂದು ಕಂಡುಬರುವ ಹಕ್ಕು ಕೋರಿಕೆಗಳನ್ನು ಅನ್ವಯವಾಗುವ ಕಾನೂನುಗಳು, ನಿಯಮಾವಳಿಗಳು ಮತ್ತು ಬ್ಯಾಂಕ್‌ನ ಸ್ಥಾಪಿತ ಕಾರ್ಯವಿಧಾನಗಳಿಗೆ ಅನುಗುಣವಾಗಿ ಮಾತ್ರ ಇತ್ಯರ್ಥಪಡಿಸಲಾಗುತ್ತದೆ.

ಭಾರತದಲ್ಲಿ ನ್ಯಾಟ್‌ವೆಸ್ಟ್ ಮಾರ್ಕೆಟ್ಸ್‌ನೊಂದಿಗಿನ ನಿಮ್ಮ ಸಂಬಂಧದ ಕುರಿತು ಯಾವುದೇ ಪ್ರಶ್ನೆಗಳಿದ್ದಲ್ಲಿ ಅಥವಾ ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು in.service@natwestmarkets.com ಮೂಲಕ ನಮ್ಮನ್ನು ಸಂಪರ್ಕಿಸಿ

ನಿಮ್ಮ ಸಹಕಾರವನ್ನು ನಾವು ಮೆಚ್ಚುತ್ತೇವೆ ಮತ್ತು ನಿಮ್ಮ ನಿರಂತರ ಬೆಂಬಲಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇವೆ"

WENDT ವೆಂಡ್ಟ್ (ಇಂಡಿಯಾ) ಲಿಮಿಟೆಡ್
CIN:L85110KA1980PLC003913
ನೋಂದಾಯಿತ ಕಚೇರಿ: ಫ್ಲಾಟ್ ನಂ.A2–105, ಕಾವೇರಿ ಬ್ಲಾಕ್, ನ್ಯಾಷನಲ್ ಗೇಮ್ಸ್ ಹೌಸಿಂಗ್ ಕಾಂಪ್ಲೆಕ್ಸ್, ಕೋರಮಂಗಲ, ಬೆಂಗಳೂರು–560 047,
ದೂರವಾಣಿ: +91 4344 405500, ಫ್ಯಾಕ್ಸ್: +914344405620 / 405630
ಇ–ಮೇಲ್: wil@wendtindia.com ವೆಬ್‌ಸೈಟ್: www.wendtindia.com

ಷೇರುದಾರರಿಗೆ ಸೂಚನೆ

ಭಾರತೀಯ ಷೇರುಪತ್ರಗಳು ಮತ್ತು ವಿನಿಮಯ ಮಂಡಳಿ ('ಸೆಬಿ') 1ನೇ ಏಪ್ರಿಲ್ 2019ರಿಂದ ಭೌತಿಕ ರೂಪದಲ್ಲಿರುವ ಷೇರುಗಳ ವರ್ಗಾವಣೆಯನ್ನು ಸ್ಥಗಿತಗೊಳಿಸಿತು. ತದನಂತರ, 1ನೇ ಏಪ್ರಿಲ್ 2019ಕ್ಕೂ ಮೊದಲು ಸಲ್ಲಿಸಲಾಗಿದ್ದು, ದಾಖಲೆಗಳಲ್ಲಿನ ನ್ಯೂನತೆಗಳು ಅಥವಾ ಇತರ ಪ್ರಕ್ರಿಯಾತ್ಮಕ ಸಮಸ್ಯೆಗಳಿಂದಾಗಿ ಹಿಂತಿರುಗಿಸಲಾದ ಭೌತಿಕ ಷೇರುಗಳ ವರ್ಗಾವಣೆ ಅರ್ಜಿಗಳನ್ನು ಮರುಸಲ್ಲಿಸಲು ಅನುಕೂಲವಾಗುವಂತೆ, ಸೆಬಿಯು 7ನೇ ಜುಲೈ 2025ರಿಂದ 6ನೇ ಜನವರಿ 2026ರವರೆಗೆ ಒಂದು ಬಾರಿಯ ವಿಶೇಷ ಅವಕಾಶವನ್ನು ಕಲ್ಪಿಸಿತ್ತು.

ಸೆಬಿಯು 30ನೇ ಜನವರಿ 2026ರ ತನ್ನ ಸುತ್ತೋಲೆಯ ಮೂಲಕ, ಭೌತಿಕ ಷೇರುಗಳ ವರ್ಗಾವಣೆ ಅರ್ಜಿಗಳ ಮರುಸಲ್ಲಿಕೆ ಮತ್ತು ಡಿಮ್ಯಾಟೀರಿಯಲೈಸೇಶನ್‌ಗಾಗಿ 5ನೇ ಫೆಬ್ರವರಿ 2026ರಿಂದ 4ನೇ ಫೆಬ್ರವರಿ 2027ರವರೆಗೆ ಒಂದು ವರ್ಷದ ಅವಧಿಗೆ ಮತ್ತೊಂದು ಬಾರಿಯ ವಿಶೇಷ ಅವಕಾಶವನ್ನು ಕಲ್ಪಿಸಿದೆ. 1ನೇ ಏಪ್ರಿಲ್ 2019ಕ್ಕೂ ಮೊದಲು ವೆಂಡ್ಟ್ (ಇಂಡಿಯಾ) ಲಿಮಿಟೆಡ್ ('ಕಂಪನಿ')ನ ಷೇರುಗಳನ್ನು ಭೌತಿಕ ರೂಪದಲ್ಲಿ ಸ್ವಾಧೀನಪಡಿಸಿಕೊಂಡಿದ್ದ ಅಥವಾ ಹೊಂದಿದ್ದ ಹೂಡಿಕೆದಾರರಿಗೆ ಈ ಸೌಲಭ್ಯ ಲಭ್ಯವಿದೆ.

ಸುಲಭ ಉಲ್ಲೇಖಕ್ಕಾಗಿ, ಷೇರುದಾರರಾಗಿ ನಿಮ್ಮ ಸ್ಥಿತಿಯ ಆಧಾರದ ಮೇಲೆ ಈ ವಿಶೇಷ ಅವಕಾಶದ ಅನ್ವಯತೆಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

ಷೇರು ವರ್ಗಾವಣೆ ಪತ್ರವನ್ನು ಕಾರ್ಯಗತಗೊಳಿಸಿದ ದಿನಾಂಕ	1ನೇ ಏಪ್ರಿಲ್ 2019ಕ್ಕೂ ಮೊದಲು ವರ್ಗಾವಣೆಗಾಗಿ ಸಲ್ಲಿಸಲಾಗಿತ್ತೇ?	ಮೂಲ ಭದ್ರತಾ ಪ್ರಮಾಣ ಪತ್ರ ಲಭ್ಯವಿದೆಯೇ?	ಪ್ರಸ್ತುತ ವಿಂಡೋದಲ್ಲಿ ಸಲ್ಲಿಸಲು ಅರ್ಹರು?
01ನೇ ಏಪ್ರಿಲ್, 2019ಕ್ಕೂ ಮೊದಲು	ಇಲ್ಲ (ಇದು ಹೊಸ ಸಲ್ಲಿಕೆ)	ಹೌದು	✓
01ನೇ ಏಪ್ರಿಲ್, 2019ಕ್ಕೂ ಮೊದಲು	ಹೌದು (ಅದು ತಿರಸ್ಕರಿಸಲ್ಪಟ್ಟಿದೆ/ಮೊದಲೇ ಹಿಂತಿರುಗಿಸಲ್ಪಟ್ಟಿದೆ)	ಹೌದು	✓
01ನೇ ಏಪ್ರಿಲ್, 2019ಕ್ಕೂ ಮೊದಲು	ಹೌದು	ಇಲ್ಲ	✗
01ನೇ ಏಪ್ರಿಲ್, 2019ಕ್ಕೂ ಮೊದಲು	ಇಲ್ಲ	ಇಲ್ಲ	✗

ಇದಲ್ಲದೆ, ಈ ವಿಶೇಷ ಅವಕಾಶದ ಅಡಿಯಲ್ಲಿ ಕೆಳಗಿನ ಪ್ರಕರಣಗಳನ್ನು ಪರಿಗಣಿಸಲಾಗುವುದಿಲ್ಲ:
- ವರ್ಗಾವಣೆದಾರ ಮತ್ತು ವರ್ಗಾವಣೆ ಸ್ವೀಕರಿಸುವವರ ನಡುವೆ ವಿವಾದಗಳಿರುವ ಪ್ರಕರಣಗಳು.
- ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ (IEPF) ಪ್ರಾಧಿಕಾರಕ್ಕೆ ಈಗಾಗಲೇ ವರ್ಗಾಯಿಸಲಾದ ಷೇರುಗಳು.

ಅರ್ಹ ಷೇರುದಾರರು ತಮ್ಮ ವರ್ಗಾವಣೆ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಕಂಪನಿಯ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟ್ (RTA) ಆಗಿರುವ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ಗೆ ಕೆಳಗಿನ ವಿಳಾಸದಲ್ಲಿ ಸಲ್ಲಿಸಬಹುದು: ಸುಶ್ರೀ ಕೃಷ್ಣ ಪ್ರಿಯಾ ಮದ್ದುಲಾ ಸಹಾಯಕ ಉಪಾಧ್ಯಕ್ಷರು ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಸೆಲೆನಿಯಂ ಬಿಲ್ಡಿಂಗ್, ಟವರ್–ಬಿ, ಪ್ಲಾಟ್ ನಂ. 31 ಮತ್ತು 32, ಫೈನಾನ್ಶಿಯಲ್ ಡಿಸ್ಟ್ರಿಕ್ಟ್, ನಾನಕ್ರಮ್ಗುಡ, ಸೇರಿಲಿಂಗಂಪಲ್ಲಿ, ಹೈದರಾಬಾದ್, ತೆಲಂಗಾಣ – 500032. ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ನ ಕಾರ್ಪೊರೇಟ್ ಕಚೇರಿಯನ್ನು 1ನೇ ಡಿಸೆಂಬರ್ 2026ರಿಂದ ಕೆಳಗಿನ ವಿಳಾಸಕ್ಕೆ ಸ್ಥಳಾಂತರಿಸಲಾಗುತ್ತಿದೆ ಎಂಬುದನ್ನು ಷೇರುದಾರರು ಗಮನಿಸಬೇಕು: 6, 23, 24 ಮತ್ತು 25ನೇ ಮಹಡಿಗಳು, ಸೌತ್ ಟವರ್, ರಾಜಪುಷ್ಪ ವೆಸ್ಟ್ ಅವೆನ್ಯೂ, ಸರ್ವೆ ನಂ. 115, ಕೋಕಾಪೇಟ್, ಸೇರಿಲಿಂಗಂಪಲ್ಲಿ ಮಂಡಲ, ರಂಗಾರೆಡ್ಡಿ ಜಿಲ್ಲೆ, ತೆಲಂಗಾಣ – 500075. ಆದ್ದರಿಂದ, ಆ ದಿನಾಂಕದ ನಂತರದ ಎಲ್ಲ ಪತ್ರವ್ಯವಹಾರಗಳನ್ನು ಹೊಸ ವಿಳಾಸಕ್ಕೆ ಕಳುಹಿಸಬೇಕು. ಹೆಚ್ಚಿನ ಸಹಾಯಕ್ಕಾಗಿ ಷೇರುದಾರರು einward.ris@kfintech.com ಗೆ ಇ–ಮೇಲ್ ಕಳುಹಿಸಬಹುದು ಅಥವಾ ಕಂಪನಿಯನ್ನು investorservices@wendtindia.com ಮೂಲಕ ಸಂಪರ್ಕಿಸಬಹುದು.

ಮೇಲೆ ತಿಳಿಸಿದ ಸುತ್ತೋಲೆಗೆ ಅನುಸಾರವಾಗಿ, ನಿಗದಿತ ಅವಧಿಯಲ್ಲಿ ನ್ಯೂನತೆಗಳನ್ನು ಸರಿಪಡಿಸಿ ಮರುಸಲ್ಲಿಸಲಾದ ಎಲ್ಲ ವರ್ಗಾವಣೆ ಅರ್ಜಿಗಳನ್ನು ವರ್ಗಾವಣೆ–ಸಹಿತ–ಡಿಮ್ಯಾಟ್ ವಿಧಾನದಲ್ಲಿ ಪ್ರಕ್ರಿಯೆಗೊಳಿಸಲಾಗುತ್ತದೆ ಎಂಬುದನ್ನೂ ಷೇರುದಾರರಿಗೆ ತಿಳಿಸಲಾಗುತ್ತಿದೆ. ಅಂದರೆ, ವರ್ಗಾವಣೆಗೆ ಅನುಮೋದನೆ ದೊರೆತ ನಂತರ ಷೇರುಗಳನ್ನು ಡಿಮ್ಯಾಟೀರಿಯಲೈಸ್ಡ್ ರೂಪದಲ್ಲಿ ಮಾತ್ರ ನೀಡಲಾಗುತ್ತದೆ ಮತ್ತು ಅವುಗಳಿಗೆ ಒಂದು ವರ್ಷದ ಲಾಕ್–ಇನ್ ಅವಧಿ ಅನ್ವಯಿಸುತ್ತದೆ. ಆದ್ದರಿಂದ, ಈ ಅವಕಾಶವನ್ನು ಬಳಸಿಕೊಳ್ಳುವ ಷೇರುದಾರರು (ಅರ್ಜಿದಾರರು) ಕಡ್ಡಾಯವಾಗಿ ಡಿಮ್ಯಾಟ್ ಖಾತೆಯನ್ನು ಹೊಂದಿರಬೇಕು. ವರ್ಗಾವಣೆಗಾಗಿ ದಾಖಲೆಗಳನ್ನು ಸಲ್ಲಿಸುವಾಗ, ಸುತ್ತೋಲೆಯಲ್ಲಿ ತಿಳಿಸಿರುವಂತೆ ವರ್ಗಾವಣೆ ದಾಖಲೆಗಳು, ಮೂಲ ಷೇರುಪತ್ರ(ಗಳು) ಮತ್ತು ಇತರ ಅಗತ್ಯ ದಾಖಲೆಗಳ ಜೊತೆಗೆ ಕ್ಲೈಂಟ್ ಮಾಸ್ಟರ್ ಲಿಸ್ಟ್ ಅನ್ನು ಸಹ ಸಲ್ಲಿಸಬೇಕು.

ಈ ಹಿಂದೆ ವರ್ಗಾವಣೆ ಅರ್ಜಿಗಳನ್ನು ಸಲ್ಲಿಸಿ, ಬಾಕಿ ಉಳಿದಿರುವ ನ್ಯೂನತೆಗಳಿಂದಾಗಿ ಇನ್ನೂ ತಮ್ಮ ಹೆಸರಿಗೆ ವರ್ಗಾಯಿಸಲಾದ ಷೇರುಗಳನ್ನು ಪಡೆಯದಿರುವ ಎಲ್ಲ ಷೇರುದಾರರು ಈ ವಿಶೇಷ ಅವಕಾಶವನ್ನು ಬಳಸಿಕೊಳ್ಳುವಂತೆ ನಾವು ಕೋರುತ್ತೇವೆ.

ವಿವರವಾದ ಸುತ್ತೋಲೆಯು ಕಂಪನಿಯ ವೆಬ್‌ಸೈಟ್‌ನ ಕೆಳಗಿನ ವಿಳಾಸದಲ್ಲಿ ಲಭ್ಯವಿದೆ: https://wendtindia.com/investors/#shareholder-information ಷೇರುದಾರರು ಅದನ್ನು ಪರಿಶೀಲಿಸಬಹುದು ಅಥವಾ investorservices@wendtindia.com ಮೂಲಕ ನಮ್ಮನ್ನು ಸಂಪರ್ಕಿಸಬಹುದು.

ವೆಂಡ್ಟ್ (ಇಂಡಿಯಾ) ಲಿಮಿಟೆಡ್ ಪರವಾಗಿ
P ARJUN RAJ
ಸಹಿ/–
ಅರ್ಜುನ್ ರಾಜ್ ಪಿ
ಕಂಪನಿ ಕಾರ್ಯದರ್ಶಿ

ದಿನಾಂಕ: 16ನೇ ನವೆಂಬರ್ 2026
ಸ್ಥಳ: ಬೆಂಗಳೂರು

ವಿಧಾನ ಪರಿಷತ್ ನೂತನ ಸದಸ್ಯರ ಪ್ರಮಾಣ ವಚನ ಸ್ವೀಕಾರ

■ **ವಿಕ ಸುದ್ದಿಲೋಕ** ಬೆಂಗಳೂರು

ವಿಧಾನ ಪರಿಷತ್‌ನ ತಲಾ ಎರಡು ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ಆಯ್ಕೆಯಾದ ನೂತನ ಸದಸ್ಯರು ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು.

ವಿಕಾಸಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಸಭಾಪತಿ ಸಲೀಂ ಅಹ್ಮದ್ ಅವರು ನೂತನ ಸದಸ್ಯರಾಗಿ ಆಯ್ಕೆಯಾಗಿರುವ ಬಿಜೆಪಿಯ ಶಶಿಲ್ ನಮೋಶಿ, ಎಸ್.ವಿ.ಸಂಕನೂರ, ಕೆ.ಎಂ.ಸುರೇಶ್ ಹಾಗೂ ಜೆಡಿಎಸ್‌ನ ಎ.ಪಿ.ರಂಗ ನಾಥ್ ಅವರಿಗೆ ಪ್ರಮಾಣ ವಚನ ಬೋಧಿಸಿದರು.

ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ಶಶಿಲ್ ನಮೋಶಿ, ಪಶ್ಚಿಮ ಪದವೀಧರರ ಕ್ಷೇತ್ರದಿಂದ ಎಸ್.ವಿ.ಸಂಕನೂರ, ಆಗ್ನೇಯ ಪದವೀಧರ ಕ್ಷೇತ್ರದಿಂದ ಕೆ.ಎಂ.ಸುರೇಶ್ ಹಾಗೂ ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ಎ.ಪಿ.ರಂಗನಾಥ್ ಅವರು ಆಯ್ಕೆಯಾಗಿದ್ದರು. ನೂತನ ಸದಸ್ಯರ ಕುಟುಂಬದವರು, ಬೆಂಬಲಿಗರು ಸಹ ಪ್ರಮಾಣ ವಚನ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಉಪ ಸಭಾಪತಿ ಉಮಾಶ್ರೀ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್, ಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಪ್ರತಿಪಕ್ಷ ಮುಖ್ಯ ಸಚೇತಕ ಎನ್. ರವಿಕುಮಾರ್, ಎಂಎಲ್ಸಿ ಟಿ.ಎ.ಶರವಣ ಇತರರು ಭಾಗವಹಿಸಿದ್ದರು.

ಏಷ್ಯಾದ ಅತಿ ದೊಡ್ಡ ತಂತ್ರಜ್ಞಾನ ಸಮಾವೇಶದ 29ನೇ ಆವೃತ್ತಿಗೆ ಕ್ಷಣಗಣನೆ

ಟೆಕ್ ಸಮ್ಮಿಟ್‌ಗೆ ಚಾಲನೆ ಇಂದು

■ **ವಿಕ ಸುದ್ದಿಲೋಕ** ಬೆಂಗಳೂರು



'ಕೃತಕ ಬುದ್ಧಿಮತ್ತೆ ಮತ್ತು ಅದರಾಚೆಗೆ' (ಎಐ ಆ್ಯಂಡ್ ಬಿಯಾಂಡ್) ಧ್ಯೇಯವಾಕ್ಯದೊಂದಿಗೆ ಪ್ರತಿಷ್ಠಿತ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯ (ಬೆಂಗಳೂರು ಟೆಕ್ ಸಮ್ಮಿಟ್– ಬಿಟಿಎಸ್) 29ನೇ ಆವೃತ್ತಿಗೆ ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರ ನ.17ರಿಂದ ಮೂರು ದಿನಗಳ ಕಾಲ ಸಾಕ್ಷಿಯಾಗಲಿದೆ.

ನಗರದ ತುಮಕೂರು ರಸ್ತೆಯಲ್ಲಿನ ಬಿಐಇಸಿಯಲ್ಲಿ ನಡೆಯಲಿರುವ ಶೃಂಗಸಭೆಯಲ್ಲಿ 65ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು, 10,000ಕ್ಕೂ ಹೆಚ್ಚು ಪ್ರತಿನಿಧಿಗಳು, 700ಕ್ಕೂ ಹೆಚ್ಚು ಭಾಷಣಕಾರರು ಮತ್ತು 1,500ಕ್ಕೂ ಹೆಚ್ಚು ಪ್ರದರ್ಶಕರು ಪಾಲ್ಗೊಳ್ಳಲಿದ್ದಾರೆ. ಎಐ ಮತ್ತು ರೊಬೊಟಿಕ್ಸ್ ಪೆವಿಲಿಯನ್ ಸೇರಿದಂತೆ ಹಲವು ವಿಶೇಷತೆಗಳು ಶೃಂಗಸಭೆಯಲ್ಲಿವೆ.

ವಿಕಾಸಸೌಧದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಐಟಿಬಿಟಿ, ಗೃಹ ಸಚಿವ ಪ್ರಿಯಾಂಕ್ ಖರ್ಗೆ, ''ಏಷ್ಯಾದ ಅತಿ ದೊಡ್ಡ ಸಮಗ್ರ ತಂತ್ರಜ್ಞಾನ ಸಮಾವೇಶವೆನಿಸಿದ 'ಬೆಂಗಳೂರು ಟೆಕ್ ಶೃಂಗಸಭೆ'ಯ 29ನೇ ಆವೃತ್ತಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಂಗಳವಾರ ಚಾಲನೆ ನೀಡಲಿದ್ದಾರೆ. ಎಐ, ಡೀಪ್‌ಟೆಕ್, ಸೆಮಿಕಂಡಕ್ಟರ್, ಜೈವಿಕ ತಂತ್ರಜ್ಞಾನ, ರೊಬೊಟಿಕ್ಸ್, ಸಾರಿಗೆ ಮತ್ತಿತರ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಒಳಗೊಂಡ ಮೂರು ದಿನಗಳ ಚರ್ಚೆ, ಪ್ರದರ್ಶನ ಮತ್ತು ಸಹಯೋಗಗಳಿಗೆ ದೇಶ– ವಿದೇಶಗಳ ಸಂದರ್ಶಕರು ಸಾಕ್ಷಿಯಾಗಲಿದ್ದಾರೆ,'' ಎಂದು ಹೇಳಿದರು.

ಎಲಿವೇಟ್ ದಶಮಾನೋತ್ಸವ: ''ನವೋದ್ಯಮಗಳಿಗೆ ಉತ್ತೇಜನ ನೀಡುವ ಪ್ರತಿಷ್ಠಿತ ಕರ್ನಾಟಕದ 'ಎಲಿವೇಟ್' ಕಾರ್ಯಕ್ರಮದ 10 ವರ್ಷಗಳ ಸಾಧನೆ ಗುರುತಿಸುವುದರ ಜತೆಗೆ ಯೂನಿಕಾರ್ನ್ ಕಂಪನಿಗಳು ಮತ್ತು ಷೇರುಪೇಟೆಯಲ್ಲಿ ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಯಶಸ್ಸು ಸಾಧಿಸಿದ ಸಂಸ್ಥೆಗಳಿಗೆ ಶೃಂಗಸಭೆಯಲ್ಲಿ ಸನ್ಮಾನಿಸುವ ಕಾರ್ಯ ನಡೆಯಲಿದೆ. ಡೀಪ್‌ಟೆಕ್ ಹೂಡಿಕೆಗಳ ಘೋಷಣೆ ಮತ್ತು 'ಎಲಿವೇಟ್' ಕಾರ್ಯಕ್ರಮದ ದಶಮಾನೋತ್ಸವ ಸಾಧನೆಯ ಸಂಭ್ರಮ ಈ ವರ್ಷದ ಪ್ರಮುಖ ಮೈಲುಗಲ್ಲು ಆಗಲಿದೆ. ಐಟಿ, ನವೋದ್ಯಮ ಮತ್ತು ಹೂಡಿಕೆದಾರರ ಪ್ರಶಸ್ತಿಗಳು, ಸ್ಮಾರ್ಟ್ ಬಯೊ ಪ್ರಶಸ್ತಿಗಳು ಹಾಗೂ ಟಿಸಿಎಸ್ ಗ್ರಾಮೀಣ ಐಟಿ ರಸಪ್ರಶ್ನೆ ಸ್ಪರ್ಧೆ ಮೂಲಕ ಸಾಧನೆ ಮತ್ತು ಹೊಸ ಪ್ರತಿಭೆಗಳನ್ನು ಗುರುತಿಸಲಾಗುವುದು,'' ಎಂದು ಹೇಳಿದರು.

1000ಕ್ಕೂ ಹೆಚ್ಚು ನವೋದ್ಯಮಗಳು ಭಾಗಿ: ''ಐಟಿ ಮತ್ತು ಡೀಪ್‌ಟೆಕ್, ಅತ್ಯಾಧುನಿಕ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್, ವಿದ್ಯುತ್ ಚಾಲಿತ ವಾಹನಗಳು, ಆರೋಗ್ಯ ಮತ್ತು ಜೈವಿಕ ತಂತ್ರಜ್ಞಾನ, ಡಿಜಿಟಲ್ ಮೂಲಸೌಕರ್ಯ ಮತ್ತು ದತ್ತಾಂಶ ಕೇಂದ್ರಗಳು, ದತ್ತಾಂಶ ಮತ್ತು ಸೈಬರ್ ಸುರಕ್ಷತೆ, ವಿಶೇಷ ನೆರವು ನೀಡುವ ತಂತ್ರಜ್ಞಾನ, ಜಾಗತಿಕ ಸಾಮರ್ಥ್ಯ ಕೇಂದ್ರಗಳು (ಜಿಸಿಸಿ), ಜಾಗತಿಕ ಸಹಯೋಗ ಮತ್ತು ಇಂಡಿಯಾ ಇನ್ನೊವೇಟ್ಸ್ ಮುಂತಾದ ವಿಷಯಗಳಲ್ಲಿ ವಿಚಾರಗೋಷ್ಠಿಗಳು ನಡೆಯಲಿವೆ. ದೇಶದ 100 ನಗರಗಳಿಂದ 30ಕ್ಕೂ ಹೆಚ್ಚು ತಂತ್ರಜ್ಞಾನ ಮತ್ತು ಉದ್ಯಮ ಕ್ಷೇತ್ರ ಪ್ರತಿನಿಧಿಸುವ 1,000ಕ್ಕೂ ಹೆಚ್ಚು ನವೋದ್ಯಮಗಳು ಭಾಗವಹಿಸಲಿವೆ,'' ಎಂದು ವಿವರಿಸಿದರು.



- 700 ಭಾಷಣಕಾರರು
- 65ಕ್ಕೂ ಹೆಚ್ಚು ದೇಶದ ಪ್ರತಿನಿಧಿಗಳು
- 10,000ಕ್ಕೂ ಅಧಿಕ ಪ್ರತಿನಿಧಿಗಳು
- 1,500ಕ್ಕೂ ಹೆಚ್ಚು ಪ್ರದರ್ಶಕರು
- 50,000ಕ್ಕೂ ಹೆಚ್ಚು ಮಂದಿ ಭೇಟಿ

3000 ಕಿಯೋ ಕಂಪ್ಯೂಟರ್ ಅಳವಡಿಕೆ

ರಾಜ್ಯ ಸರಕಾರ ಹಾಗೂ ಕಿಯೋನಿಕ್ಸ್ ಸಂಸ್ಥೆ ಅಭಿವೃದ್ಧಿಪಡಿಸಿರುವ ಅಗ್ಗದ ಬೆಲೆಯ ಎಐ ಆಧಾರಿತ 3000 'ಕಿಯೋ ಕಂಪ್ಯೂಟರ್'ಗಳನ್ನು ಸರಕಾರಿ ಶಾಲೆ ಸೇರಿದಂತೆ ಇತರೆಡೆ ಅಳವಡಿಸಲಾಗಿದೆ. ಕಾರ್ಯಕ್ಷಮತೆ ಆಧರಿಸಿ ಮುಂದೆ ಹಂತಹಂತವಾಗಿ ಬಳಕೆ ವಿಸ್ತರಿಸಲಾಗುವುದು ಎಂದು ಸಚಿವ ಪ್ರಿಯಾಂಕ್ ಹೇಳಿದರು.

ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ, ''ಅರಿವು ಕೇಂದ್ರಗಳು, ವಸತಿ ಶಾಲೆಗಳು ಸೇರಿದಂತೆ ಇತರೆಡೆ 3000 ಕಿಯೋ ಕಂಪ್ಯೂಟರ್‌ಗಳನ್ನು ಅಳವಡಿಸಲಾಗಿದೆ. ಮುಂದೆ ತಾಲೂಕು, ಹೋಬಳಿ ಮಟ್ಟದ ಸರಕಾರಿ ಶಾಲೆಗಳಲ್ಲೂ ಕಿಯೋ ಕಂಪ್ಯೂಟರ್ ಅಳವಡಿಕೆಗೆ ಚಿಂತಿಸಲಾಗಿದೆ. ಹಾಗೆಯೇ ರಾಜ್ಯದ ಎಲ್ಲೆಡೆ ಹಾಗೂ ನೆರೆಯ ರಾಜ್ಯಗಳಲ್ಲೂ ಕಿಯೋ ಕಂಪ್ಯೂಟರ್ ಬಳಕೆಗೆ ಉತ್ತೇಜಿಸಲು ಒತ್ತು ನೀಡಲಾಗಿದೆ,'' ಎಂದು ಹೇಳಿದರು.

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99 Vol.27 Issue No.317